ನವ್ಯ ಸಾಹಿತ್ಯದ ಬಗ್ಗೆ, ಮನುಷ್ಯನ ಆಂತರಿಕ ವಿಪ್ಲವದ ಬಗ್ಗೆ, ಸ್ವ ಕಲ್ಪನೆಯ ಬಗ್ಗೆ ಹೆಚ್ಚು ಆಸಕ್ತಿ ಹುಟ್ಟಿತು. ಮುಂದಿನ ಕಲಿಕೆಗೆ ಧಾರವಾಡಕ್ಕೆ ಹೋಗಬೇಕೆಂದು ಆಗಲೇ ನಿರ್ಧರಿಸಿದೆ.

**◆ ನಿಮ್ಮ ಮೊಟ್ಟಮೊದಲ ಬರಹಗಳು ಹೇಗಿದ್ದವು?**

ನನಗೆ ಮೂರನೇ ವರ್ಷಕ್ಕೆ ಅಕ್ಷರಾಭ್ಯಾಸ ಮಾಡಿಸಿದ್ದರು. ಆರನೇ ವರ್ಷಕ್ಕೆ ಮೊದಲ ಕಥೆ ಬರೆದೆ. ಏಳು ಸುತ್ತಿನ ಕೋಟೆಯಲ್ಲಿ ಬಂಧಿತನಾದ ರಾಜಕುಮಾರನನ್ನು ರಾಜಕುಮಾರಿ ಬಿಡಿಸಿ ತರುವಂಥ ಕಥೆಯದು! ನಂತರ ಶಾಲಾ ಪತ್ರಿಕೆಗಳಿಗೆ ಬರೆಯುತ್ತಿದ್ದೆ. ವರದಕ್ಷಿಣೆ ಸಮಸ್ಯೆ, ವಿಧವಾ ವಿವಾಹ, ಬಾಲ್ಯವಿವಾಹ ಇಂತಹ ಇಶ್ಯೂಗಳ ಚರ್ಚೆ ಅಲ್ಲಿರುತ್ತಿತ್ತು. 'ಪ್ರತೀಕ' ಹಾಗೂ 'ಕಸ್ತೂರಿ', 'ಕರ್ಮವೀರ', 'ಸಂಯುಕ್ತ ಕರ್ನಾಟಕ' ಪತ್ರಿಕೆಗಳಿಗೆ ತಾಯಿಯ ಹೆಸರಿನಲ್ಲಿ ಬರೆಯುತ್ತಿದ್ದೆ. 1962ರಲ್ಲಿ ಕಾಲೇಜಿಗೆ ಬಂದ ಮೇಲೆ ನನ್ನ ಹೆಸರಲ್ಲಿ ಬರೆದೆ. ಕರ್ನಾಟಕ ಕಾಲೇಜಿಗೆ ಬಂದಮೇಲೆ ನವ್ಯ ಸಾಹಿತ್ಯದ ಸಂಪರ್ಕ ದೊರೆಯಿತು. ಅದು ನವ್ಯ ಸಾಹಿತ್ಯದ ಉಚ್ಛ್ರಾಯ ಕಾಲ. ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ ಅಲ್ಲಿ ಕಾರ್ಯಕ್ರಮಗಳಿಗೆ ಬರುತ್ತಿದ್ದರು. ಅವರ ಆಲೋಚನಾ ವಿಧಾನ ಪ್ರಭಾವ ಬೀರಿತು. ನವ್ಯದ ಆಕೃತಿ ದೊರೆಯಿತು.

**◆ ಧಾರವಾಡ ನಿಮ್ಮನ್ನು ರೂಪಿಸುವಲ್ಲಿ ಎಂಥ ಪಾತ್ರ ವಹಿಸಿದೆ? ನೀವು ಬೆಳೆಯುವ ಬರೆಯುವ ದಿನಗಳಲ್ಲಿ ಅನೇಕ ದಿಗ್ಗಜರು ಅಲ್ಲಿದ್ದರು.**

ನಾನು ಹುಟ್ಟಿದ್ದು ಧಾರವಾಡದಲ್ಲೇ. ನನ್ನ ತಂದೆ ಪ್ರಶ್ನೆಪತ್ರಿಕೆ ತಯಾರಿಕೆಗೆಂದು ಇಲ್ಲಿಗೆ ಬಂದಾಗ ಗರ್ಭಿಣಿಯಾಗಿದ್ದ ಅಮ್ಮನೂ ಜೊತೆಗಿದ್ದರು. ಆಗ ಆಕಸ್ಮಿಕವಾಗಿ ನನ್ನ ಹುಟ್ಟು ಇಲ್ಲಿಯೇ ಆಯಿತು. ಈ ನಂಟು ಮತ್ತೆ ಬಿ.ಎ ಓದುವಾಗ ನನ್ನನ್ನು ಧಾರವಾಡದ ಜತೆ ಬೆಸೆಯಿತು. ಆಗ ಧಾರವಾಡಕ್ಕೆ ಬಂದ ನಾನು ಮತ್ತೆ ವಾಪಸ್ ಹೋಗಲೇ ಇಲ್ಲ. ನಾನು ಇಲ್ಲಿ ಎಂ.ಎ. ಓದುವಾಗ ಶಂಕರ ಮೊಕಾಶಿ ಪುಣೇಕರ್, ಜಿ.ಎಸ್. ಆಮೂರ, ಶಾಂತಿನಾಥ ದೇಸಾಯಿಯವರಂಥ ದಿಗ್ಗಜರು ನನಗೆ ಗುರುಗಳಾಗಿದ್ದರು. ಪುಣೇಕರ್ ಅವರು ಉಳಿದವರಿಗಿಂತ ಭಿನ್ನವಾದವರು. ಅವರ ತಲೆಯಲ್ಲಿ ಬಹಳಷ್ಟು ವಿಚಾರಗಳು ಮಥನಗೊಳ್ಳುತ್ತಿದ್ದವು. ಆಮೂರರು ಕೂಡ ತುಂಬಾ ಪ್ರಭಾವಿಸಿದ್ದಾರೆ. ಅವರಿಗೆ ಆಳವಾದ ಜ್ಞಾನವಿತ್ತು. ಸೃಜನಶೀಲತೆಯಿತ್ತು. ತುಂಬಾ ಕ್ರಿಯಾಶೀಲರಾಗಿರುತ್ತಿದ್ದರು. ಅಂಥವರನ್ನೆಲ್ಲ ನಮ್ಮ ಕರ್ನಾಟಕ ಯೂನಿವರ್ಸಿಟಿ ಉಳಿಸಿಕೊಳ್ಳಲಾಗದ್ದಕ್ಕೆ ಖೇದವಿದೆ. ಶಂ.ಬಾ. ಜೋಶಿ, ಕಣವಿಯವರು ಎಲ್ಲ ಇಲ್ಲಿದ್ದರು. ಇನ್ನು ಬೇಂದ್ರೆಯವರೊಂದಿಗೆ ಅಷ್ಟೊಂದು ಒಡನಾಟವಿರದಿದ್ದರೂ ಆ ಪರಿಸರವನ್ನೇ ಪ್ರಭಾವಿಸುವ ಮಾಂತ್ರಿಕ ಶಕ್ತಿ ಅವರಿಗಿತ್ತು. ಅವರು ಘಂಟೆ ಹೊಡೆದಂತೆ ಮಾತನಾಡುತ್ತಿದ್ದರು. ಅವರ ಕೃತಿಗಳಲ್ಲಿ ಹೊಮ್ಮುವ ಹೆಣ್ಣಿನ ಅಂತಃಸತ್ವದ ಅರಿವಾಗುತ್ತಿತ್ತು.

**◆ ಏನದು ಹೆಣ್ಣಿನ ಅಂತಃಸತ್ವ? ಭಾರತೀಯ ಸಮಾಜದಲ್ಲಿ ಅದರ ವಿಕಾಸ ಸಾಧ್ಯವಿದೆಯೇ?**

ಭಾರತದ ಸಂದರ್ಭದಲ್ಲಿ ಹೆಣ್ಣನ್ನು ಶಕ್ತಿಯೆಂದು ವೈಭವೀಕರಿಸಿದರೂ ನೈಜಸ್ಥಿತಿ ಬೇರೆಯೇ ಇದೆ. ಮತ್ತೊಂದು ಕಡೆ ಆಕೆಯ ದಮನವೇ ಆಗುತ್ತಿರುತ್ತದೆ. ಇದೊಂಥರ ಹಿಪಾಕ್ರಸಿಯೇ ಆಗಿದೆ. ಅವಳ ಪ್ರೀತಿ, ನಿಷ್ಠೆ, ಕ್ರಿಯಾಶಕ್ತಿಯನ್ನು ದಮನಿಸುವ ಪುರುಷ ಪ್ರಧಾನ ವ್ಯವಸ್ಥೆ ಅವಳ ಶಕ್ತಿಯನ್ನೇ ದೌರ್ಬಲ್ಯವಾಗಿ ಬಿಂಬಿಸಿದೆ.

**◆ ನವ್ಯ ಸಾಹಿತ್ಯದ ಏರುಗಾಲದಲ್ಲಿ ನೀವೂ ಬರೆದಿರಿ. ನಿಮ್ಮನ್ನು ನವ್ಯ ಲೇಖಕಿ ಎಂದು ಕರೆಯುವುದನ್ನು ಒಪ್ಪುವಿರಾ?**

ನನಗೆ ಅಭ್ಯಂತರವೇನಿಲ್ಲ. ನವ್ಯ ಚಳವಳಿಯ ಕಾಲದಲ್ಲೇ ಬರೆದೆ. ಅದರೆ ಅದಕ್ಕೇ ಅಂಟಿಕೊಂಡು ಕೂಡಲಿಲ್ಲ. 'ಮುಕ್ತಿ' ಓದಿದ ಮೇಲೆ ನವ್ಯದೆಡೆಗಿನ ಒಲವು ಜಾಸ್ತಿಯಾಯಿತು, ನಿಜ. ನಂತರ ನಮ್ಮ ದಾರಿಗಳೆಲ್ಲ ಬೇರೆಬೇರೆಯಾದವು

